# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ವಿಆ(ಘತ್ಯಾನಿ)/ಪಿಆರ್/ 13/2016-17

ವಿಶೇಷ ಆಯುಕ್ತರು (ಘ.ತ್ಯಾ.ನಿ) ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:18.04.2016.

## ಕಛೇರಿ ಆದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಉತ್ಪತ್ತಿಯಾಗುತ್ತಿರುವ ಎಲೆ (ಒಣ&ಹಸಿ) ಮತ್ತಿತರ ಹಸಿರು ತ್ಯಾಜ್ಯ ಹಾಗೂ ರಸ್ತೆ, ಪಾದಚಾರಿ ಮಾರ್ಗದಲ್ಲಿರುವ ಕಟ್ಟಡಗಳ ಭಗ್ನಾವಶೇಶಗಳನ್ನು ನಿಗಧಿತ ಸ್ಥಳಗಳಲ್ಲಿ ವಿಲೇವಾರಿ ಮಾಡುವ ಸೂಚನೆ ಕುರಿತು

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತಿನಿತ್ಯ ಎಲೆ, ಹಸಿರು ತ್ಯಾಜ್ಯ ಹಾಗೂ ಕಟ್ಟ ಭಗ್ನಾವಶೇಶಗಳು ಉತ್ಪತ್ತಿಯಾಗುತ್ತಿದ್ದು, ಸದರಿ ತ್ಯಾಜ್ಯಗಳನ್ನು ಕೆಳಕಂಡಂತೆ ವಿಲೇವಾರಿ ಮಾಡಲು ಸೂಚಿಸಿದೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತಿನಿತ್ಯ ಮರಗಳಿಂದ ಬೀಳುವ ಎಲೆ (ಒಣ&ಹಸಿ) ಮತ್ತಿತರ ಹಸಿರು ತ್ಯಾಜ್ಯವನ್ನು ಮುಖ್ಯವಾಗಿ ಪಾಲಿಕೆಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದೊಂದಿಗೆ ಮಿಶ್ರಣಗೊಂಡು ವಿಲೇವಾರಿಯಾಗುತ್ತಿರುವುದು ಗಮನಿಸಲಾಗಿದೆ. ಸದರಿ ಹಸಿರು ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ವಾರ್ಡ್‌ವಾರು ಲಭ್ಯವಿರುವ ಹಾಗೂ ಸ್ಥಳಾವಕಾಶವಿರುವ ಸೂಕ್ತ ಪಾರ್ಕ್‌ಗಳಲ್ಲಿ ಗುಂಡಿಗಳನ್ನು ನಿರ್ಮಿಸಿ ಅವುಗಳಲ್ಲಿ ಪದರ ಪದರವಾಗಿ ವಿಲೇವಾರಿ ಮಾಡಿ ಮಣ್ಣು ಮುಚ್ಚುವುದರಿಂದ ಈ ತ್ಯಾಜ್ಯವು ಸಮರ್ಪಕವಾಗಿ ವಿಲೇವಾರಿ ಮಾಡಿದಂತಾಗುತ್ತದೆ. ಇದರಿಂದ ಗೊಬ್ಬರ ತಯಾರಾಗುವುದಲ್ಲದೆ ಸದರಿ ಗೊಬ್ಬರವನ್ನು ಉದ್ಯಾನವನದಲ್ಲಿರುವ ಗಿಡಮರಗಳಿಗೆ ಗೊಬ್ಬರವನ್ನಾಗಿ ಉಪಯೋಗಿಸಬಹುದಾಗಿರುತ್ತದೆ. ಹಬ್ಬ ಮುಂತಾದ ಆಚರಣೆಗಳ ಸಂದರ್ಭಗಳಲ್ಲಿ ಅಧಿಕ ಪ್ರಮಾಣದಲ್ಲಿ ಹಸಿರು ತ್ಯಾಜ್ಯವು ಉತ್ಪತ್ತಿಯಾಗುತ್ತಿರುತ್ತದೆ. ರಸ್ತೆಗಳಲ್ಲಿ ಗುಡಿಸುವ ಸಂದರ್ಭದಲ್ಲಿ ಹಸಿರು ಕಸವನ್ನು ಸಹ ಬೇರ್ಪಡಿಸಿ ಸಂಗ್ರಹಿಸಬೇಕಾಗಿರುತ್ತದೆ. ಈ ಎಲ್ಲಾ ಹಸಿರು ತ್ಯಾಜ್ಯವನ್ನು ಮೇಲ್ಕಂಡಂತೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಿದ್ದಲ್ಲಿ ತ್ಯಾಜ್ಯವು ಸಂಸ್ಕರಣ ಘಟಕಗಳಿಗೆ ಸ್ಥಳಾಂತರಿಸುವ ಪ್ರಮಾಣವು ಕಡಿಮೆಯಾಗುತ್ತದೆ. ಅದುದರಿಂದ ವಲಯ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು ಹಾಗೂ ಅಧೀಕ್ಷಕ ಅಭಿಯಂತರರವರು ಹಸಿರು ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ವಾರ್ಡ್‌ವಾರು ಸ್ಥಳಾವಕಾಶವಿರುವ ಸೂಕ್ತ ಪಾರ್ಕ್‌ಗಳಲ್ಲಿ ಗುಂಡಿಗಳನ್ನು ನಿರ್ಮಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು. ನಂತರ ಸದರಿ ತ್ಯಾಜ್ಯದಿಂದ ಉತ್ಪಾದನೆಗೊಳ್ಳುವ ಗೊಬ್ಬರವನ್ನು ಮರಗಿಡಗಳಿಗೆ ಉಪಯೋಗಿಸಲು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಕ್ರಮ ಕೈಗೊಳ್ಳಲು ಸೂಚಿಸಿದೆ.

...2)

2. ಅ) ವಾರ್ಡ್‌ವಾರು ವಿವಿಧ ರಸ್ತೆಗಳಲ್ಲಿ ಪ್ರತಿನಿತ್ಯ ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಅವಶ್ಯವಿರುವ ಮರಳು, ಜಲ್ಲಿ, ಇಟ್ಟಿಗೆ, ಕಬ್ಬಿಣದ ಕಂಬಿಗಳು ರಸ್ತೆಯ, ಪಾದಚಾರಿ ಮಾರ್ಗ ಹಾಗೂ ಮೋರಿಗಳ ಮೇಲೆ ಸಾರ್ವಜನಿಕರು ಸಂಗ್ರಹಣೆ ಮಾಡುತ್ತಿರುವುದರಿಂದ ಸಾರ್ವಜನಿಕರ ಓಡಟಕ್ಕೆ ಅನಾನುಕೂಲವಾಗಿ ಹಾಗೂ ಮಳೆ ನೀರು ಮೋರಿಗಳಲ್ಲಿ ಸರಾಗವಾಗಿ ತೊಂದರೆಯಾಗಿರುವುದು ಕಂಡು ಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ದಂಡ ವಿಧಿಸಿ ತೆರವುಗೊಳಿಸಿ, ಕಟ್ಟಡ ಸಾಮಾಗ್ರಿಗಳನ್ನು ತಮ್ಮ ಸ್ವಂತ ಜಾಗ/ನಿವೇಶನಗಳಲ್ಲಿ ಮಾತ್ರವೇ ಸಂಗ್ರಹಿಸಲು ಕಟ್ಟುನಿಟ್ಟಿನ ನಿರ್ದೇಶನ ನೀಡುವುದು

ಆ) ಮುಂದುವರೆದು ಕಟ್ಟಡ ನಿರ್ಮಾಣ ಸಮಯದಲ್ಲಿ ಮತ್ತು ನಂತರದ ಸಂದರ್ಭಗಳಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯವನ್ನು (**C&D Waste**) ಪಾದಚಾರಿ ಮಾರ್ಗದಲ್ಲಿ, ಮೋರಿಗಳ ಮೇಲೆ ಸಾರ್ವಜನಿಕರು ಬಿಸಾಡುತ್ತಿರುವುದು ಕಂಡು ಬಂದಿರುತ್ತದೆ. ಈಗಾಗಲೇ ಕಟ್ಟಡ ಭಗ್ನಾವಷೇಶಗಳನ್ನು ಅನೇಕ ಕ್ವಾರಿಗಳು/ಸ್ಥಳಗಳನ್ನು ಗುರುತಿಸಲಾಗಿದ್ದರೂ ನಿಗಧಿತ ಸ್ಥಳಗಳಲ್ಲಿ ವಿಲೇವಾರಿ ಮಾಡದಿರುವುದು ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ನ್ಯೂನತೆಯಾಗಿರುತ್ತದೆ. ಅದುದರಿಂದ ಈ ಬಗ್ಗೆ ಸೂಕ್ತ ಗಮನಹರಿಸಿ ವಾರ್ಡ್‌ಗಳಲ್ಲಿ ಇರುವಂತಹ ಕಟ್ಟಡ ಭಗ್ನಾವಷೇಶಗಳನ್ನು ಸೂಕ್ತ ದಂಡಗಳನ್ನು ವಿಧಿಸಿ ಮತ್ತು ನಿಗಧಿತ ಸ್ಥಳಗಳಿಗೆ ವಿಲೇವಾರಿ ಮಾಡಿ ಇನ್ನು ಮುಂದೆ ಕೂಡಲೇ ಸ್ಥಳದಿಂದ ತೆರವುಗೊಳಿಸಲು ಕ್ರಮ ಕೈಗೊಳ್ಳುವುದು ಹಾಗೂ ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ವರದಿ ಮಾಡಲು ಸೂಚಿಸಿದೆ. ಈ ಕುರಿತು ನ್ಯೂನತೆಗಳು ಕಂಡು ಬಂದಲ್ಲಿ ತಮ್ಮಗಳನ್ನು ನೇರ ಜವಾಬ್ದಾರಿಯನ್ನಾಗಿ ಮಾಡಲಾಗುವುದೆಂದು ತಿಳಿಯಪಡಿಸಲಾಗಿದೆ.

18.4.16

ವಿಶೇಷ ಆಯುಕ್ತರು (ಘ.ತ್ಯಾ.ನಿ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು**

1. ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಉಪ ಮಹಾಪೌರರು ಆಧ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಅಧ್ಯಕ್ಷರು ತೋಟಗಾರಿಕೆ ಸ್ಥಾಯಿ ಸಮಿತಿರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
6. ಜಂಟಿ ಆಯುಕ್ತರು (ಘ.ತ್ಯಾ.ನಿ.) ರವರಿಗೆ ಮುಂದಿನ ಕ್ರಮಕ್ಕಾಗಿ.
7. ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು (ಘ.ತ್ಯಾ.ನಿ.) ರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
8. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
9. ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
10. ಎಲ್ಲಾ ವಲಯದ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
11. ಎಲ್ಲಾ ವಲಯದ ತೋಟಗಾರಿಕಾ ಅಧೀಕ್ಷಕರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
12. ಕಛೇರಿ ಕಡತಕ್ಕೆ.